India Foundation for the Arts
20 Years of Celebrating the Arts

# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
# ಕರ್ನಾಟಕ ಸರ್ಕಾರಿ ಶಾಲೆಗಳ ಶಿಕ್ಷಕ/ಶಿಕ್ಷಕಿಯರಿಂದ
# ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ
# ಕಡೆಯ ದಿನಾಂಕ: ಮೇ ೧೫, ೨೦೧೫

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಲು ಶಾಲಾ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಇದು ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ–ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿದೆ. ಶಿಕ್ಷಕರು, ಶಾಲಾ ಸಮುದಾಯ ಹಾಗೂ ಸ್ಥಳೀಯ ಕಲಾವಿದರ ಸಂಭಂದವನ್ನು ಗಟ್ಟಿಗೊಳಿಸುವುದು ಈ ಯೋಜನೆಯ ಮುಖ್ಯ ಗುರಿ.

ಕಳೆದ ಎರಡು ವರ್ಷದಲ್ಲಿ ಕೊಪ್ಪಳ, ಹಾವೇರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕಲಬುರ್ಗಿ, ಧಾರವಾಡ, ಮಂಡ್ಯ, ಬೀದರ್ ಹಾಗೂ ಗದಗ ಸೇರಿದಂತೆ ಐ.ಎಫ್.ಎ., ಇಡೀ ರಾಜ್ಯಾದ್ಯಂತ ಶಿಕ್ಷಕರಿಗೆ ೧೭ ಅನುದಾನಗಳನ್ನು ನೀಡಿದೆ. ಈ ಅನುದಾನಗಳು ಸರ್ಕಾರಿ ಶಾಲೆ ಒಳಗೊಂಡಂತೆ ಅದಾಗಲೇ ಅಸ್ಥಿತ್ವದಲ್ಲಿರುವ ಸ್ಥಳೀಯ ಕಲಾ ಶಿಕ್ಷಣ ಪ್ರಕಾರಗಳನ್ನು ಮುಂದುವರೆಸುವುದು ಮತ್ತು ಸಮುದಾಯ ಶಾಲಾ ಶಿಕ್ಷಣ ಹಾಗೂ ಪರಿಸರದ ಜೊತೆ ಸಂಭಂದ ಗಟ್ಟಿಗೊಳಿಸುವ ಹೊಸ ಹುರುಪನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ಈ ಯೋಜನೆಗಳು ವಿವಿಧ ಕಲಾ ಪ್ರಕಾರಗಳು ಹಾಗೂ ಸಾಹಿತ್ಯ ಕ್ಷೇತ್ರದ ಮೇಲೆ ಹೆಚ್ಚು ಒತ್ತು ಕೊಟ್ಟಿವೆ. ಅದರ ಜೊತೆಗೆ ಪರಿಸರ ಹಾಗೂ ಜಾನಪದ ಸಂಸ್ಕೃತಿಯನ್ನು ಶಾಲಾ ಶಿಕ್ಷಣದಲ್ಲಿ ಮತ್ತೆ ಪರಿಚಯ ಮಾಡುವ ಕೆಲಸ ಆಗಿದೆ.

ಈ ಅನುದಾನಗಳ ಬಗೆಗೆ ಹೆಚ್ಚಿನ ಮಾಹಿತಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://sites.google.com/site/kalikalisu/project/phase-4---2012

**ಅನುದಾನದ ಉದ್ದೇಶಗಳು:**

- ಶಿಕ್ಷಕರು ತಮ್ಮ ಪಠ್ಯ ಭೋದನೆಯಿಂದಾಚೆಗೆ ತೆರೆದುಕೊಳ್ಳುವ ಹಾಗೂ ಶಾಲೆಯಲ್ಲಿ ಕಲಾ ಶಿಕ್ಷಣದ ಸಾಧ್ಯತೆಗಳನ್ನು ಶೋಧಿಸಲು ಪ್ರೋತ್ಸಾಹಿಸುವುದು.
- ಶಾಲಾ ಸಮುದಾಯದಲ್ಲಿ ಶಿಕ್ಷಕರು ಹಾಗೂ ಕಲಾವಿದರನ್ನು ಜಂಟಿ ಪಾಲುದಾರರನ್ನಾಗಿ ಮಾಡಲು ಅವಕಾಶ ಸೃಷ್ಟಿಸುವುದು.
- ಪಠ್ಯ ಹಾಗೂ ಬೋಧನಾ ಕ್ರಮಗಳಲ್ಲಿ ಕಲಾ ಪ್ರಕಾರಗಳನ್ನು ಒಳಪಡಿಸುವುದರ ಮೂಲಕ ಶ್ರೀಮಂತಗೊಳಿಸುವುದು.

ಅನುದಾನದ ಅವಧಿಯ ನಂತರವೂ ಮುಂದುವರೆಯಬಹುದಾದ ಎಲ್ಲಾ ಸಾಧ್ಯತೆಗಳು ಈ ಯೋಜನೆಗಳಿಗಿದೆ.

**ಅರ್ಹ ಅಭ್ಯರ್ಥಿಗಳು:** ವಿಷಯ (ಸಬ್ಜೆಕ್ಟ್) ಶಿಕ್ಷಕರು ಹಾಗೂ ಕಲಾ ಶಿಕ್ಷಕಕರು ಈ ಯೋಜನೆಗೆ ಪ್ರಸ್ತಾವನೆಗಳನ್ನು ಸಲ್ಲಿಸಬಹುದು.

## ಯೋಜನೆಯ ವ್ಯಾಪ್ತಿ:

- ಯೋಜನೆಯ ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು.

ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.

- ಬೋಧನಾ ಕೊಠಡಿಗಳಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳ ಶಕ್ತಿ ಸಾಧ್ಯತೆಗಳನ್ನು ಶೋಧಿಸುವುದು.
- ವಿದ್ಯಾರ್ಥಿಗಳ ನಡುವೆಯೇ ನಡೆಯಬಹುದಾದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಸಂಘಗಳನ್ನು ಪ್ರೋತ್ಸಾಹಿಸಿ ಅವರು ವಿವಿಧ ಕಲಾ ಪ್ರಕಾರಗಳ ಬಗ್ಗೆ ನಿತ್ಯ ಅನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗುಮಾಡುವುದು (ರಂಗ, ಚಿತ್ರಕಲೆ, ಸಿನೆಮಾ, ಸಾಹಿತ್ಯ, ಫೋಟೋಗ್ರಫಿ, ಸಂಗೀತ ಇತ್ಯಾದಿ)
- ಸ್ಥಳೀಯ ಬದುಕಿನ ಸತ್ಯಗಳು, ಸಾಮಾಜಿಕ ನ್ಯಾಯ ಹಾಗೂ ಪರಿಸರ ಸಂಬಂಧಿ ವಿಷಯಗಳ ಬಗ್ಗೆ ಶಾಲೆ ಮತ್ತು ಸಮುದಾಯವನ್ನು ಸೂಕ್ಷ್ಮಮತಿಗಳನ್ನಾಗಿ ಮಾಡಲು ಕಲೆಯನ್ನು ಬಳಸಿಕೊಳ್ಳುವುದು.

ಕಲಾ ಶಿಕ್ಷಣದ ಜೊತೆ ಮುಂದುವರೆಯುವಂಥಃ ಅಲ್ಪಕಾಲೀನ ಹಾಗೂ ದೀರ್ಘಕಾಲೀನ ಯೋಜನೆಗಳನ್ನು ರೂಪಿಸುವುದು.

## ಅನುದಾನಕ್ಕೆ ಆಯ್ಕೆಯಾದ ಶಿಕ್ಷಕರಿಂದ ನಿರೀಕ್ಷೆಗಳೇನು:

- ಮುಂದಿನ ದಿನಗಳಲ್ಲಿ ಅನುಷ್ಟಾನಕ್ಕೆ ತರಬಲ್ಲ ಒಂದು ಸಂಪೂರ್ಣ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಬೇಕು.
- ಯೋಜನಾ ಚಟುವಟಿಕೆಗಳನ್ನು ಧ್ವನಿ, ಚಿತ್ರಿಕೆ, ವರದಿಗಳು ಹಾಗೂ ಫೋಟೋಗಳ ಮೂಲಕ ಕಾಲಕಾಲಕ್ಕೆ ದಾಖಲು ಮಾಡಬೇಕು.
- ಚಟುವಟಿಕೆಯ ನಡಾವಳಿಗಳ ಬಗ್ಗೆ ದಾಖಲೆ ಸಲ್ಲಿಸಬೇಕು, ಮಧ್ಯಂತರ ವರದಿ ಸಲ್ಲಿಸಬೇಕು, ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ ಸಲ್ಲಿಸಬೇಕು. ಅಂತಿಮ ವರದಿಯಲ್ಲಿ ಅನುದಾನ ಸಂಭಂದಿದ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳನ್ನು ದಾಖಲಿಸಬೇಕು.

## ಯೋಜನಾ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ:

- ಯೋಜನೆಗೆ ಸಂಭಂದಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ ಏಪ್ರಿಲ್ ೩೦, ೨೦೧೫ ರ ಒಳಗೆ ನಮಗೆ ಕಳುಹಿಸಬಹುದು.
- ನಿಮ್ಮ ಅಂತಿಮ ಪ್ರಸ್ತಾವನೆಯ ಲಕೋಟೆಯು ಮೇ ೧೫, ೨೦೧೫ ರ ಒಳಗೆ ನಮ್ಮ ಕಚೇರಿ ಸೇರಿರಬೇಕು. ಅಂತಿಮ ದಿನಾಂಕದೊಳಗೆ ಯೋಜನೆಗೆ ಸಂಭಂದಿತ ಸಾಮಗ್ರಿಗಳನ್ನು ಒದಗಿಸಬೇಕು.
- ನಿಮ್ಮ ಪ್ರಸ್ತಾವನೆ ಆಯ್ಕೆ ಪಟ್ಟಿಯಲ್ಲಿ ಬಂದಾಗ ನಿಗಧಿ ಮಾಡಿದ ದಿನಾಂಕದಂದು ಖುದ್ದು ಚರ್ಚೆಗೆ ಬರಬೇಕು. ಹೊರಗಿನ ಮೌಲ್ಯಮಾಪಕರು ನಿಮ್ಮ ಪ್ರಸ್ತಾವನೆಯನ್ನು ಅವಲೋಕಿಸುತ್ತಾರೆ, ನಂತರ ಐ.ಎಫ್,ಎ ತೀರ್ಮಾನ ಅಂತಿಮ.

ಜೂನ್ ೧೫, ೨೦೧೫ ಕ್ಕೆ ಅನುದಾನದ ಪಟ್ಟಿಯನ್ನು ನಿರೀಕ್ಷಿಸಬಹುದು.

ನಿಮ್ಮ ಪ್ರಸ್ತಾವನೆ ಒಳಗೊಳ್ಳಬೇಕಾದ ವಿಷಯಗಳು

- ಕಲಾ ಮಾಧ್ಯಮದಲ್ಲಿ ಹಾಗೂ ಕಲಾ ಮಾಧ್ಯಮದ ಮುಖೇನ ನೀವು ಈ ಹಿಂದೆ ಹಾಗೂ ಸದ್ಯ ಮಾಡಿದ ಕೆಲಸಗಳ ಬಗೆಗಿನ ಮಾಹಿತಿ.
- ನೀವು ಆಯ್ಕೆಮಾಡಿಕೊಂಡ ಶಾಲೆಯಲ್ಲಿ ನಿಮ್ಮ ಯೋಜನೆಗೆ ಬೇಕಾದ ಅಂದಾಜು ಕಾಲಾವಧಿ.
- ಕೆಲಸದ ಪ್ರಕ್ರಿಯೆ ಹಾಗೂ ಜಾರಿಗೊಳಿಸುವ ವಿಧಾನದ ಬಗ್ಗೆ ಸಂಪೂರ್ಣ ವಿವರ.
- ನಿಮ್ಮ ಯೋಜನಾವಧಿಯ ನಂತರ ನಿರೀಕ್ಷಿಸಬಹುದಾದ ಫಲಿತಾಂಶ ಮತ್ತು ಅದರಿಂದ ಕಲಾ ಶಿಕ್ಷಣಕ್ಕೆ ಯಾವ ರೀತಿ ಅನುಕೂಲವಾಗಬಹುದು ಎಂಬುದರ ಬಗ್ಗೆ ನಿಮ್ಮ ನಿರೀಕ್ಷೆಗಳೇನು.
- ಯೋಜನಾವಧಿಗೆ ಬೇಕಾದ ಬಜೆಟ್.
- ನಿಮ್ಮ ಯೋಜನಾ ಪ್ರಸ್ತಾವನೆ, ಕನ್ನಡ, ಇಂಗ್ಲೀಷ್, ಹಿಂದಿ ಅಥವಾ ಉರ್ದು ಬಾಷೆಗಳಲ್ಲಿ ಬರೆಯಬಹುದು.
- ಯೋಜನಾ ಅವಧಿ
- ನಿಮ್ಮ ಯೋಜನಾ ಅವಧಿ ಕನಿಷ್ಟ ೯ ತಿಂಗಳು ಹಾಗೂ ಗರಿಷ್ಟ ೧೮ ತಿಂಗಳಿರಬೇಕು.

ಬಜೆಟ್:

- ಯೋಜನಾ ಅನುದಾನವನ್ನು ಗರಿಷ್ಟ ೧ ಲಕ್ಷ ರೂಪಾಯಿವರೆಗೆ ಕೇಳಬಹುದು.
- ಅನುದಾನವು ಯೋಜನಾ ಚಟುವಟಿಕೆ, ಪ್ರಯಾಣ ವೆಚ್ಚ, ಅಗತ್ಯವಿದ್ದಲ್ಲಿ ಸಣ್ಣ-ಪುಟ್ಟ ಪರಿಕರಗಳನ್ನು ಕೊಳ್ಳುವ ವೆಚ್ಚ, ಪ್ರತಿಯೊಂದು ಖರ್ಚು ವೆಚ್ಚಗಳು ಯೋಜನೆಗೆ ಸಂಭಂದಪಟ್ಟವೇ ಆಗಿರಬೇಕು ಎಂಬುದನ್ನು ಖಾತ್ರಿಪಡಿಸಿ. ಲೆಕ್ಕ ಪರಿಶೋಧಕರ ಫೀ (ಶುಲ್ಕ) ಗಾಗಿ ಗರಿಷ್ಟ ೩೦೦೦/- ರೂಪಾಯಿಗಳನ್ನು ಮೀಸಲಿರಿಸಬಹುದು.
- ಇಡೀ ಯೋಜನಾವಧಿಗೆ ನಿಮ್ಮ ಗೌರವಧನ  ಹತ್ತು ಸಾವಿರ ಮೀರಿರಬಾರದು. ಹೊರಗಿನ ಸಂಪನ್ಮೂಲ ವ್ಯಕ್ತಿಗಳ ಗೌರವಧನ ೨೦ ಸಾವಿರ ಮೀರಬಾರದು.
- ನಿಮ್ಮ ಯೋಜನಾ ಬಜೆಟ್ ಗೌರವಧನ ಹಾಗೂ ಲೆಕ್ಕ ಪರಿಶೋಧಕರಿಗೆ ನೀಡುವ ಫೀ ಒಳಗೊಂಡಿರುವುದನ್ನು ಖಾತ್ರಿಪಡಿಸಿಕೊಳ್ಳಿ.
- ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.

ನಿಮ್ಮ ಅರ್ಜಿ, ಪ್ರಸ್ತಾವನೆ ಅಥವಾಪ್ರಶ್ನೆಗಳನ್ನು
anupamaprakash@indiaifa.org ಗೆ ಕಳುಹಿಸಲು ಕೋರಲಾಗಿದೆ.

ಅನುಪಮಾ ಪ್ರಕಾಶ್
ಕಲಾ ಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಅಪೂರ್ವ)
ನೆಲ ಮಹಡಿ, ನಂ ೨೫೯,  ೪ ನೆಯ ಅಡ್ಡ ರಸ್ತೆ
ರಾಜಮಹಲ್ ವಿಲಾಸ್, ಎರಡನೆಯ ಹಂತ, ಎರಡನೆಯ ಬ್ಲಾಕ್
ಬೆಂಗಳೂರು- ೫೬೦ ೦೯೪
ದೂರವಾಣಿ: ೦೮೦-೨೩೪೧ ೪೬೮೧/ ೮೨

ಈ ಯೋಜನೆಯ ಅನುದಾನ ಗೋಥೆ ಇನ್ಸ್ಟಿಟ್ಯೂಟ್, ಮ್ಯಾಕ್ಸ್ ಮುಲ್ಲರ್ ಭವನ, ಬೆಂಗಳೂರು
ಹೆಚ್ಚಿನ ಮಾಹಿತಿಗಾಗಿ ಕಲಿ-ಕಲಿಸು ಸಂಪರ್ಕಜಾಲದಲ್ಲಿ ಪಡೆಯಬಹುದು
http://www.indiaifa.org/programmes/arts-education.html